REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 19 । ಆಗಸ್ಟ್ 16, 2023 । ಬುಧವಾರ । ಪುಟಗಳು : 8 । ಬೆಲೆ : 2/-

### ಸಾಲಗಾರರಿಗೆ ನಿರಾಳ ತಂದ ಆರ್‌ಬಿಐ ಕ್ರಮ । ಸದ್ಯದಲ್ಲೇ ಹೊಸ ಮಾರ್ಗಸೂಚಿ

## ಬ್ಯಾಂಕುಗಳಿಗೆ ಮೂಗುದಾರ




**ಮುಂಬಯಿ :** ರೆಪೊ ದರ ಏರಿಕೆಯಿಂದ ಗೃಹ ಸಾಲ ಸೇರಿದಂತೆ ಎಲ್ಲ ಸಾಲಗಳ ಬಡ್ಡಿದರಗಳು ಈಗಾಗಲೇ ಗಣನೀಯವಾಗಿ ಏರಿಕೆಯಾಗಿವೆ. ಹೆಚ್ಚಿನ ಬಡ್ಡಿದರದಿಂದ ತತ್ತರಿಸುತ್ತಿರುವ ಮನೆ, ವಾಹನ ಮತ್ತು ಇತರ ಸಾಲಗಾರರಿಗೆ ಪರಿಹಾರ ನೀಡಲು ರಿಸರ್ವ್ ಬ್ಯಾಂಕ್ ಮುಂದಾಗಿದೆ. ತೇಲುವ ಬಡ್ಡಿ ದರದ (ಫ್ಲೋಟಿಂಗ್ ಇಂಟರೆಸ್ಟ್) ಸಾಲಗಳನ್ನು ಸ್ಥಿರ ಬಡ್ಡಿದರದ (ಫಿಕ್ಸ್ಡ್ ಇಂಟರೆಸ್ಟ್) ಸಾಲವಾಗಿ ಬದಲಿಸಲು ಸಾಲಗಾರರಿಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ನಿಯಮಾವಳಿಗಳನ್ನು ಹೊರತರುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ.

ಈಗಾಗಲೇ ಫ್ಲೋಟಿಂಗ್‌ನಿಂದ ಸ್ಥಿರ ಬಡ್ಡಿಗೆ ಮತ್ತು ಸ್ಥಿರದಿಂದ ಫ್ಲೋಟಿಂಗ್ ಬಡ್ಡಿದರದ ಸಾಲಕ್ಕೆ ಬದಲಾಗಲು ಗ್ರಾಹಕರಿಗೆ ಅವಕಾಶವಿದೆ. ಆದರೆ, ಈ ಬಗ್ಗೆ ಬ್ಯಾಂಕ್‌ಗಳು ಗ್ರಾಹಕರಲ್ಲಿ ಜಾಗೃತಿ ಮೂಡಿಸುವಂತಿಲ್ಲ. ನಿಯಮಾವಳಿಗಳೂ ಬ್ಯಾಂಕನಿಂದ ಬ್ಯಾಂಕಿಗೆ ಭಿನ್ನವಾಗಿವೆ. ವರ್ಗಾವಣೆ ಶುಲ್ಕದಲ್ಲೂ (ಶಿಫ್ಟಿಂಗ್ ಫೀ) ಏಕರೂಪತೆಯಿಲ್ಲ. ಪಾರದರ್ಶಕತೆಯ ಕೊರತೆ ಸಾಕಷ್ಟಿದೆ. ಇದನ್ನು ಶೀಘ್ರದಲ್ಲಿಯೇ ಸೂಕ್ತ ನಿಯಮಾವಳಿಗಳ ಮೂಲಕ ಗ್ರಾಹಕಸ್ನೇಹಿಯಾಗಲು ರಿಸರ್ವ್ ಬ್ಯಾಂಕ್ ಹೊರಟಿದೆ. ಆರ್‌ಬಿಐನ ದ್ವೈಮಾಸಿಕ ಹಣಕಾಸು ನೀತಿಯನ್ನು ಬಿಡುಗಡೆ ಮಾಡಿದ ಗವರ್ನರ್ ಶಕ್ತಿಕಾಂತ ದಾಸ್, "ಹೊಸ ನಿಯಮಾವಳಿಗಳು ಶೀಘ್ರದಲ್ಲೇ ಜಾರಿಗೆ ಬರಲಿವೆ. ಸಾಲದ ಅವಧಿ ಮತ್ತು ಇಎಂಐ ಕುರಿತಾಗಿ ಸಾಲಗಾರರೊಂದಿಗೆ ಬ್ಯಾಂಕ್‌ಗಳು ಸ್ಪಷ್ಟವಾಗಿ ಸಂವಹನ ನಡೆಸುವುದು ಕಡ್ಡಾಯವಾಗಲಿದೆ," ಎಂದಿದ್ದಾರೆ.

ಫ್ಲೋಟಿಂಗ್ ಬಡ್ಡಿದರದಲ್ಲಿ ಲೋನ್ ಪಡೆದ ಸಾಲಗಾರರ ಜತೆ ಚರ್ಚಿಸದೆ ಮತ್ತು ಅವರ ಒಪ್ಪಿಗೆಯಿಲ್ಲದೆಯೇ ಬ್ಯಾಂಕ್‌ಗಳು ಸಾಲದ ಅವಧಿಯನ್ನು ಅಸಮಂಜಸವಾಗಿ ವಿಸ್ತರಿಸಿದ ಅನೇಕ ಪ್ರಕರಣಗಳು ರಿಜರ್ವ್ ಬ್ಯಾಂಕ್‌ನ ಗಮನಕ್ಕೆ ಬಂದಿವೆ. ಈ ಹಿನ್ನೆಲೆಯಲ್ಲಿ ಸಾಲಗಾರರ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ನೀತಿ ನಿಯಮ ಜಾರಿಗೆ ಆರ್‌ಬಿಐ ಮುಂದಾಗಿದೆ ಎಂದು ಹೇಳಿದ್ದಾರೆ. ಇಎಂಐ ಹೆಚ್ಚಳ ಅಥವಾ ಸಾಲದ ಅವಧಿ ಹೆಚ್ಚಳ ಸೇರಿದಂತೆ ಸಾಲದ ವಿಷಯದಲ್ಲಿ ಗ್ರಾಹಕರಿಗೆ ಪೂರ್ವ ಮಾಹಿತಿ ನೀಡದೇ ಬ್ಯಾಂಕ್‌ಗಳು ತಮ್ಮದೇ ಆದ ನಿಯಮಗಳನ್ನು ಜಾರಿಗೊಳಿಸುವ ಪ್ರವೃತ್ತಿಗೆ ಮುಂದಿನ ದಿನಗಳಲ್ಲಿ ತೆರೆ ಬೀಳಲಿದೆ.

### ದಿನಾಂಕ : 26.08.2023ರಂದು ವಿಜಯಪುರದಲ್ಲಿ ಮಹಿಳಾ ಸಹಕಾರ ಬ್ಯಾಂಕ್ / ಮಹಿಳಾ ಆಡಳಿತ ಮಂಡಳಿ ಸದಸ್ಯರು / ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಎಲ್ಲಾ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ಆಡಳಿತ ಮಂಡಳಿ ಸದಸ್ಯರುಗಳಿಗೆ ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ವಿಜಯಪುರದ "ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ" ಹರಿಯಲ್ ಗಲ್ಲಿ, ಜಾಡರ್ ಗಲ್ಲಿ, ವಿಜಯಪುರ – 586 101 ಇಲ್ಲಿ ದಿನಾಂಕ:26.08.2023ರಂದು ಬೆಳಿಗ್ಗೆ 09.30ಕ್ಕೆ ಉಪಹಾರ ಮತ್ತು ಪ್ರತಿನಿಧಿಗಳ ನೋಂದಣಿಯೊಂದಿಗೆ ಈ ವಿಚಾರ ಸಂಕಿರಣವು ಪ್ರಾರಂಭವಾಗುತ್ತದೆ. ಈ ಕಾರ್ಯಕ್ರಮದಲ್ಲಿ ಮಾನ್ಯ ಸಹಕಾರ ಸಚಿವರು ಮತ್ತು ಮಹಾಮಂಡಳದ ಅಧ್ಯಕ್ಷರು ಮತ್ತು ರಾಜ್ಯ ಸರ್ಕಾರದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಮುಖ್ಯಸ್ಥರು ಮತ್ತು ಗಣ್ಯರುಗಳು ಭಾಗವಹಿಸಲಿದ್ದಾರೆ.

ಈ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಗವರ್ನನ್ಸ್, ಡಿಜಿಟಲ್ ಆ್ಯಂಡ್ ಫೈನಾನ್ಶಿಯಲ್ ಟೆಕ್ನಾಲಜಿ / ರೋಲ್ ಆಫ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ಸ್ ಆ್ಯಂಡ್ ವುಮೆನ್ಸ್ ಎಂಪವರಮೆಂಟ್ / ಬ್ಯುಸಿನೆಸ್ ಡೆವಲಪ್‌ಮೆಂಟ್ ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಈ ವಿಚಾರ ಸಂಕಿರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಕೋರಿರುತ್ತಾರೆ.

2 ಬ್ಯಾಂಕ್ ದಂಡ ಶುಲ್ಕದಿಂದ ರೂ.35 ಸಾವಿರ ಕೋಟಿ ಸಂಗ್ರಹ, ಮಿನಿಮಮ್ ಬ್ಯಾಲೆನ್ಸ್ ದಂಡವೇ ರೂ. 21 ಸಾವಿರ ಕೋಟಿ ಸಂಗ್ರಹ

4 ಕುಮಟಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ನಿಮ್ಮ ಪ್ರಗತಿಯ ಪಥದಲ್ಲಿ ನಮ್ಮ ಮಹಾಮಂಡಳ ಸದಾ ನಿಮ್ಮೊಂದಿಗೆ ಇರುತ್ತದೆ

2023ನೇ ವರ್ಷದಲ್ಲಿ ನಮ್ಮ ಮಹಾಮಂಡಳದ ಯೋಜನೆಯಂತೆ ಮೊದಲ ಎಂಟು ತಿಂಗಳಲ್ಲಿ ನಡೆಸಬೇಕಾದ ಎಲ್ಲ ತರಬೇತಿ ಕಾರ್ಯಾಗಾರಗಳನ್ನು, ರಾಜ್ಯ ಮಟ್ಟದ ವಿಚಾರ ಸಂಕಿರಣಗಳನ್ನು, ವೆಬಿನಾರ್ ಮೂಲಕ ಇನ್ನಿತರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗಿದೆ ಎಂದು ತಿಳಿಸ ಬಯಸುತ್ತೇನೆ.

ಯಾವುದೇ ಬಗೆಯ ಸಂಘ-ಸಂಸ್ಥೆ ಇರಲಿ ನಿರಂತರವಾಗಿ ಅವು ಪ್ರಗತಿ ಪಥದಲ್ಲಿ ಸಾಗಬೇಕಾಗಿದಲ್ಲಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾಗಿದ್ದಲ್ಲಿ ಮೊದಲಿಗೆ ಆ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ಕಾಲ ಕಾಲಕ್ಕೆ ಅಗತ್ಯ ಶೈಕ್ಷಣಿಕ, ತಾಂತ್ರಿಕ ತರಬೇತಿಗಳನ್ನು ನೀಡಬೇಕಿರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಹಾಗೂ ತರಬೇತಿ ವ್ಯವಸ್ಥೆ ಮಾಡುವುದು, ಅದನ್ನು ಸಮರ್ಪಕವಾಗಿ ನಿಭಾಯಿಸುವ ಜವಾಬ್ದಾರಿ ಸದರಿ ಸಂಸ್ಥೆಯದ್ದೇ ಆಗಿರುತ್ತದೆ.

ಈ ಹಿನ್ನೆಲೆಯಲ್ಲಿ, ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗಳ, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರಿಗೆ ಸೂಕ್ತ ಶಿಕ್ಷಣ, ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. ಅವರುಗಳು ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನದ ಅರಿವು ಬೆಳಸಿಕೊಳ್ಳಲು ಅವರ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ದಕ್ಷತೆ ಮೂಡಿಸುವ ಸಲುವಾಗಿಯೇ ಈ ತರಬೇತಿಗಳನ್ನು, ವಿಚಾರ ಸಂಕಿರಣಗಳನ್ನು ಮಹಾಮಂಡಳ ಆಯೋಜಿಸುತ್ತಾ ಬಂದಿರುತ್ತದೆ.

ಇದರೊಂದಿಗೆ ಸಹಕಾರ ಬ್ಯಾಂಕುಗಳು ತಮ್ಮ ನಿತ್ಯದ ವ್ಯವಹಾರದಲ್ಲಿ ಪಾರದರ್ಶಕತೆ ರೂಪಿಸುವುದು ಕೂಡ ಅಗತ್ಯ. ಭದ್ರ ತಳಹದಿಯ ಮೇಲೆ ರೂಪುಗೊಳ್ಳುವ ಮೌಲ್ಯಾಧಾರಿತ ಪಾರದರ್ಶಕ್ಯದಿಂದಾಗಿ ಸಂಸ್ಥೆಯೂ ಪ್ರಗತಿಯತ್ತ ದಾಪುಗಾಲು ಹಾಕಲು ಸಾಧ್ಯ. ಸಂಸ್ಥೆಗಳು ತಾವು ತೆಗೆದುಕೊಳ್ಳಬಹುದಾದ ನೀತಿ-ನಿರ್ಧಾರಗಳ ಮತ್ತು ಅದರ ಕಾರ್ಯವಿಧಾನಗಳ ಬಗ್ಗೆ ಗ್ರಾಹಕರಿಗೆ ಸ್ಪಷ್ಟವಾದ ಮಾಹಿತಿ ರವಾನೆ ಮಾಡುವುದು ಈ ಪಾರದರ್ಶಕತೆಯ ಮೊದಲ ಹೆಜ್ಜೆ. ಪಾರದರ್ಶಕತೆಯಿಂದ ವ್ಯವಹಾರದ ಗುಣಮಟ್ಟವನ್ನು ಹೆಚ್ಚಿಸಬಹುದು ಹಾಗೆಯೇ, ಯಾವುದೇ ಬಗೆಯ ವ್ಯವಹಾರದಲ್ಲಿನ ನಷ್ಟವನ್ನು ತಡೆಯಬಹುದಾಗಿದೆ. ಇದರಿಂದ ಗ್ರಾಹಕರಿಗೆ ಸಂಸ್ಥೆಯ ಮೇಲಿನ ವಿಶ್ವಾಸ ವೃದ್ಧಿಯಾಗುತ್ತದೆ. ಹೀಗೆ, ಬ್ಯಾಂಕುಗಳು ಉನ್ನತ ಮಟ್ಟದಲ್ಲಿ ಗ್ರಾಹಕ ಸ್ನೇಹಿ ಸಂಸ್ಥೆಯಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಹಣಕಾಸು ಸಂಸ್ಥೆಗಳು ತಾವು ನಿರ್ಧರಿಸುವ ಠೇವಣಿಗಳ ಮೇಲಿನ ಬಡ್ಡಿ, ನೀಡುವ ಸಾಲ-ಮುಂಗಡಗಳು ಹಾಗೂ ಹೂಡಿಕೆಗಳಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಂಡಲ್ಲಿ, ಮುಂದೆ ಆಗಬಹುದಾದ ಯಾವುದೇ ಬಗೆಯ ನಷ್ಟಗಳನ್ನು ತಡೆಯಬಹುದಾಗಿದೆ. ಹೂಡಿಕೆದಾರರು, ಷೇರುದಾರರು, ನಿಯಂತ್ರಕರು ಮತ್ತು ಇತರೆ ಮಧ್ಯಸ್ಥಗಾರರ ಅನುಕೂಲಕ್ಕಾಗಿ ತನ್ನ ಎಲ್ಲಾ ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ಕಾಲಕಾಲಕ್ಕೆ ಬಹಿರಂಗಪಡಿಸುವ ಹೊಣೆಗಾರಿಕೆ ಸಂಸ್ಥೆಯ ಆಡಳಿತ ಮಂಡಳಿಗಳದ್ದಾಗಿದೆ. ನಮ್ಮ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ತಮ್ಮ ಆಡಳಿತ ಮಂಡಳಿ ಸದಸ್ಯರಿಗೆ, ಅಧಿಕಾರಿಗಳಿಗೆ, ನೌಕರ ವರ್ಗದವರಿಗೆ, ಅಗತ್ಯ ಶಿಕ್ಷಣ, ತರಬೇತಿ ನೀಡುವುದಕ್ಕೆ ಹಾಗೂ ಗ್ರಾಹಕರಿಗೆ ಹೆಚ್ಚಿನ ಸೌಲಭ್ಯಗಳ ಬಗ್ಗೆ ಹೆಚ್ಚಿನ ಗಮನಹರಿಸುವುದು ಸೂಕ್ತವಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಮಹಾಮಂಡಳ ನಿಮ್ಮೊಂದಿಗೆ ಸದಾ ಇರುತ್ತದೆಂಬ ಆಶ್ವಾಸನೆ ನೀಡ ಬಯಸುತ್ತೇನೆ.

▶▶ ಎಚ್.ಕೆ. ಪಾಟೀಲ್

### ಬ್ಯಾಂಕ್ ದಂಡ ಶುಲ್ಕದಿಂದ ರೂ.35 ಸಾವಿರ ಕೋಟಿ ಸಂಗ್ರಹ, ಮಿನಿಮಮ್ ಬ್ಯಾಲೆನ್ಸ್ ದಂಡವೇ ರೂ. 21 ಸಾವಿರ ಕೋಟಿ ಸಂಗ್ರಹ

**ನವದೆಹಲಿ :** ವಿವಿಧ ದಂಡ, ಶುಲ್ಕದಿಂದ ಬ್ಯಾಂಕಿಂಗ್ ಸೇವೆಯಲ್ಲಿ 35 ಸಾವಿರ ಕೋಟಿ ರೂ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಈ ಕುರಿತು ಸಂಸದೆ ಅಮೀ ಯಾಗ್ನಿಕ್ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್‌ಕರಾಡ್ ಅವರು ರಾಜ್ಯಸಭೆಯಲ್ಲಿ ಈ ಮಾಹಿತಿ ನೀಡಿದ್ದು, ಬ್ಯಾಂಕ್‌ಖಾತೆಯಲ್ಲಿ ಕನಿಷ್ಠ ಮೊತ್ತ ಉಳಿಸಿಕೊಳ್ಳದೇ ಇರುವುದಕ್ಕೆ ದಂಡ, ಮಿತಿಗಿಂತ ಹೆಚ್ಚಿನ ಬಾರಿ ಎಟಿಎಂ ಬಳಕೆಗೆ ಶುಲ್ಕ ಹಾಗೂ ಎಸ್‌ಎಂಎಸ್‌ಸೇವೆಗೆ ಶುಲ್ಕದ ಮೂಲಕ ವಾಣಿಜ್ಯ ಬ್ಯಾಂಕ್‌ಗಳು 2018ರಿಂದ ಈಚೆಗೆ ಗ್ರಾಹಕರಿಂದ ಒಟ್ಟು 35,587.68 ಕೋಟಿ ಸಂಗ್ರಹಿಸಿವೆ ಎಂದು ಹೇಳಿದ್ದಾರೆ.

2018ರಿಂದ ಈಚೆಗೆ ಖಾತೆಯಲ್ಲಿ ಕನಿಷ್ಠ ಮೊತ್ತ ಇಲ್ಲದ್ದಕ್ಕೆ ದಂಡವಾಗಿ 21,044.04 ರೂ. ಸಂಗ್ರಹವಾಗಿದ್ದು, ಉಚಿತ ಮಿತಿಗಿಂತ ಹೆಚ್ಚು ಬಾರಿ ಎಟಿಎಂ ಬಳಕೆ ಮೇಲೆ ಹೇರಲಾದ ದಂಡ ಸಂಗ್ರಹ 8,289.32ರೂ ಮತ್ತು ಎಸ್‌ಎಂಎಸ್‌ಸೇವೆಗಳಿಗೆ 6,254.32 ರೂ ಶುಲ್ಕ ಹೇರಲಾಗಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹಾಗೂ ಖಾಸಗಿ ವಲಯದ ಎಕ್ಸಿಸ್‌ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್ ನೀಡಿರುವ ಅಂಕಿ-ಅಂಶಗಳನ್ನು ಆಧರಿಸಿ ಈ ಮಾಹಿತಿ ನೀಡಿರುವುದಾಗಿ ಅವರು ತಿಳಿಸಿದ್ದಾರೆ.

ಆರ್‌ಬಿಐ 2015ರ ಜುಲೈ 1ರಂದು ಹೊರಡಿಸಿರುವ ಪ್ರಕಟಣೆಯಂತೆ, ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಉಳಿಸಿಕೊಳ್ಳದವರಿಗೆ ಬ್ಯಾಂಕ್‌ನ ಆಡಳಿತ ಮಂಡಳಿ ಒಪ್ಪಿರುವ ನೀತಿಯಂತೆ ದಂಡ ವಿಧಿಸಲು ಬ್ಯಾಂಕ್‌ಗಳಿಗೆ ಅವಕಾಶ ಇದೆ. ಆದರೆ, ಹೀಗೆ ವಿಧಿಸುವ ದಂಡವು ನ್ಯಾಯೋಚಿತವಾಗಿ ಇರಬೇಕು ಮತ್ತು ಸೇವೆಗಳನ್ನು ನೀಡುವುದಕ್ಕೆ ತಗಲುವ ಸರಾಸರಿ ವೆಚ್ಚಕ್ಕಿಂತಲೂ ಹೆಚ್ಚಿಗೆ ಇರದಂತೆ ನೋಡಿಕೊಳ್ಳಬೇಕು ಎಂದು ಅವರು ವಿವರಿಸಿದ್ದಾರೆ. 2021ರ ಜೂನ್‌10ರ ಆರ್‌ಬಿಐ ಅಧಿಸೂಚನೆಯ ಪ್ರಕಾರ, ಗ್ರಾಹಕರು ತಾವು ಖಾತೆ ಹೊಂದಿರುವ ಬ್ಯಾಂಕಿನ ಎಟಿಎಂ ಮೂಲಕ ಪ್ರತಿ ತಿಂಗಳು ಐದು ಬಾರಿ ಉಚಿತವಾಗಿ ವಹಿವಾಟು ನಡೆಸಬಹುದು. ಬೇರೆ ಬ್ಯಾಂಕ್‌ಎಟಿಎಂ ಮೂಲಕ ನಗರ ಪ್ರದೇಶದಲ್ಲಿ ತಿಂಗಳಿಗೆ ಮೂರು ಬಾರಿ, ಗ್ರಾಮೀಣ ಭಾಗದಲ್ಲಿ ತಿಂಗಳಿಗೆ ಐದು ಬಾರಿ ಮಾತ್ರ ಶುಲ್ಕ ರಹಿತವಾಗಿ ವಹಿವಾಟು ನಡೆಸುವ ಮಿತಿ ವಿಧಿಸಲಾಗಿದೆ. ಈ ಮಿತಿ ಮೀರಿದರೆ ಪ್ರತಿ ವಹಿವಾಟಿಗೆ ಗರಿಷ್ಠ 21 ಶುಲ್ಕ ವಿಧಿಸುವುದು 2022ರ ಜನವರಿ 1 ರಿಂದ ಜಾರಿಗೆ ಬಂದಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಅಭಿನಂದನೆ ಸಲ್ಲಿಕೆ



**ತುಮಕೂರು** : ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ನವರನ್ನು ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ ಬ್ಯಾಂಕಿನ ಅಧ್ಯಕ್ಷ ಕೆ.ಎನ್.ಗೋವಿಂದರಾಜು, ಉಪಾಧ್ಯಕ್ಷ ಕೆ.ಎಸ್.ರಾಮಮೂರ್ತಿ ರವರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಕೆ. ವೆಂಕಟರಾಜು, ಸಿ.ಎಸ್. ಸಂಜಯ್, ಎನ್.ಎ.ಅರುಣ್‌ಕುಮಾರ್, ಟಿ. ನರಸಿಂಹಮೂರ್ತಿ, ಬಿ.ಎ.ಲಕ್ಷ್ಮೀಕಾಂತ ಶೆಟ್ಟಿ, ಗೀತಾ ಬಾಲರಾಜು, ಸಿ.ಬಿ.ಕ ಕನಕಲಕ್ಷ್ಮೀ, ಟಿ.ಎ. ಪಾರ್ಥಸಾರಥಿ, ಡಿ.ಎಲ್.ಲಕ್ಷ್ಮೀಪತಿ, ಎನ್.ವಿ. ಬಾಲಾಜಿ, ಎಲ್.ಎ. ರಾಘವೇಂದ್ರ ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಸ್. ಸುಮಾ ಮುಂತಾದವರು ಉಪಸ್ಥಿತರಿದ್ದರು.

# ಬಡ್ಡಿ ದರದಲ್ಲಿ ಯಾವುದೇ ಬದಲಾವಣೆ ಇಲ್ಲ, ಸತತ 3ನೇ ಬಾರಿಗೆ ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

ಬಡ್ಡಿ ದರ ನಿಗದಿ ಮಾಡುವ ಭಾರತೀಯ ರಿಸರ್ವ್ ಬ್ಯಾಂಕಿನ ಸಮಿತಿಯು ಸತತ ಮೂರನೇ ಬಾರಿಗೆ ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ಧರಿಸಿದೆ. ಸಮಿತಿಯು ಸತತ ಮೂರನೇ ಬಾರಿಗೆ ರೆಪೊ ದರವನ್ನು ಶೇಕಡಾ 6.5ರಲ್ಲೇ ಉಳಿಸಿಕೊಳ್ಳಲು ತೀರ್ಮಾನಿಸಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಮೂರು ದಿನಗಳ ಹಣಕಾಸು ನೀತಿ ಸಮಿತಿ (ಎಂಪಿಸಿ)ಯ ನಿರ್ಧಾರಗಳನ್ನು ಪ್ರಕಟಿಸಿದ ಅವರು, "ಎಂಪಿಸಿ ಜಾಗರೂಕವಾಗಿರಲು ಹಾಗೂ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡಲು ನಿರ್ಧರಿಸಿದೆ," ಎಂದು ಹೇಳಿದ್ದಾರೆ.

ಆರ್‌ಬಿಐ ಬ್ಯಾಂಕ್‌ಗಳಿಗೆ ನೀಡುವ ಸಾಲಕ್ಕೆ ವಿಧಿಸುವ ಬಡ್ಡಿಯನ್ನು ರೆಪೋ ದರ ಎನ್ನಲಾಗುತ್ತದೆ. ಪ್ರಮುಖ ನೀತಿ ದರವಾದ ರೆಪೊ ದರವನ್ನು ಕೊನೆಯದಾಗಿ ಫೆಬ್ರವರಿ 2023 ರಲ್ಲಿ 25 ಮೂಲ ಅಂಕಗಳಷ್ಟು (ಬಿಪಿಎಸ್) ಹೆಚ್ಚಿಸಲಾಗಿತ್ತು. ಆರ್‌ಬಿಐ ಏಪ್ರಿಲ್ ಮತ್ತು ಜೂನ್ ಸಭೆಗಳಲ್ಲಿ ದರವನ್ನು ಯಥಾಸ್ಥಿತಿಯಲ್ಲಿ ಇರಿಸಿತ್ತು. ಇದೇ ರೀತಿ ಜುಲೈ 13-31ರ ನಡುವೆ 75 ಅರ್ಥಶಾಸ್ತ್ರಜ್ಞರ ರಾಯಿಟರ್ಸ್ ಸಮೀಕ್ಷೆಯಲ್ಲಿ ಕೇಂದ್ರೀಯ ಬ್ಯಾಂಕ್ ತನ್ನ ತನ್ನ ಆಗಸ್ಟ್ 10ರ ನೀತಿ ಸಭೆಯಲ್ಲಿ ರೆಪೊ ದರವನ್ನು ಶೇ. 6.50ರಲ್ಲೇ ಬದಲಾಗದೆ ಇರಿಸುವ ನಿರೀಕ್ಷೆಯನ್ನು ವ್ಯಕ್ತಪಡಿಸಿದ್ದರು.

"ತರಕಾರಿಗಳು ಮತ್ತು ಬೇಳೆಕಾಳುಗಳ ಬೆಲೆಗಳು ಏರುತ್ತಿರುವ ಕಾರಣ ಹಣದುಬ್ಬರವು ಶೇ.6ರ ಗಡಿಯತ್ತ ಸಾಗುವ ನಿರೀಕ್ಷೆಯಿದೆ. ಇದು ತಾತ್ಕಾಲಿಕವಾಗಿದ್ದು, ಈ ಕಾರಣಕ್ಕೆ ದರಗಳನ್ನು ಹೆಚ್ಚಿಸುವ ಅಗತ್ಯವಿಲ್ಲ ಎಂದು ನಾವು ನಿರೀಕ್ಷಿಸುತ್ತೇವೆ. ಇತರ ಕೇಂದ್ರೀಯ ಬ್ಯಾಂಕುಗಳು ದರಗಳನ್ನು ಹೆಚ್ಚಿಸುತ್ತಿವೆ ಎಂಬುದು ಬಡ್ಡಿ ದರ ಏರಿಕೆಗೆ ಪ್ರಾಥಮಿಕ ಕಾರಣವಲ್ಲ. ಬದಲಾಗಿ ರೆಪೋ ದರವನ್ನು ಬದಲಾಯಿಸದಿರುವುದಕ್ಕೆ ಮತ್ತೊಂದು ಸಮರ್ಥನೆಯಾಗಿರಬಹುದು," ಎಂದು ಬ್ಯಾಂಕ್ ಆಫ್ ಬರೋಡಾದ




ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

ಹಣದುಬ್ಬರದ ಏರಿಕೆಯನ್ನು ನಿಯಂತ್ರಿಸಲು ಎಂಪಿಸಿಯು ರೆಪೋ ದರವನ್ನು ಮೇ 2022 ರಿಂದ ಫೆಬ್ರವರಿ 2023 ರವರೆಗೆ ಒಟ್ಟು 250 ಮೂಲ ಅಂಕಗಳಷ್ಟು ಅಥವಾ ಶೇ. 2.5ರಷ್ಟು ಹೆಚ್ಚಿಸಿದೆ.

ಹಲವಾರು ಅರ್ಥಶಾಸ್ತ್ರಜ್ಞರು ಸಿಪಿಐ ಹಣದುಬ್ಬರವು ಜೂನ್‌ನಲ್ಲಿದ್ದ ಶೇ. 4.81ಕ್ಕೆ ಹೋಲಿಸಿದರೆ ಶೇ.6-6.5ಕ್ಕೆ ಏರಿಕೆಯಾಗಬಹುದು ಎಂದು ಊಹಿಸಿದ್ದರೂ, ಬಡ್ಡಿದರ ಏರಿಕೆ ಮಾಡದಂತೆ ತಜ್ಞರು ಸಲಹೆ ನೀಡಿದ್ದರು.

ಹಣದುಬ್ಬರವು ಮೇ ತಿಂಗಳಲ್ಲಿ 25 ತಿಂಗಳ ಕನಿಷ್ಠ ಮಟ್ಟವಾದ ಶೇ. 4.25ಕ್ಕೆ ಕುಸಿದ ನಂತರ ಜೂನ್‌ನಲ್ಲಿ ಇದೇ ಹಣದುಬ್ಬರ ಶೇ. 4.81ಕ್ಕೆ ಏರಿಕೆ ಕಂಡಿತ್ತು.

ಹಣ್ಣುಗಳು ಮತ್ತು ತರಕಾರಿಗಳ ಬೆಲೆ ಏರಿಕೆಯೊಂದಿಗೆ ಹಣದುಬ್ಬರ ದರವು ಜುಲೈನಲ್ಲಿ ತೀವ್ರ ಏರಿಕೆ ಕಾಣುವ ಎಲ್ಲಾ ಸಾಧ್ಯತೆ ಇದೆ. ಆರ್‌ಬಿಐ ಹಣದುಬ್ಬರವನ್ನು ತನ್ನ ಸಹಿಷ್ಣುತೆಯ ಮಿತಿಯಾದ ಶೇ. 2-6ರ ಒಳಗೆ ಉಳಿಸಿಕೊಳ್ಳಲು ಸತತವಾಗಿ ರೆಪೋ ದರವನ್ನು ಏರಿಕೆ ಮಾಡುತ್ತಾ ಬಂದಿತ್ತು.

## ಕಂಟ್ರೋಲರ್ಸ್ ಆಫೀಸ್ ಕೋ-ಆಪರೇಟಿವ್ ಬ್ಯಾಂಕ್ : ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



**ಬೆಂಗಳೂರು :** ಕಂಟ್ರೋಲರ್ಸ್ ಆಫೀಸ್ ಕೋ-ಆಪರೇಟಿವ್ ಬ್ಯಾಂಕಿನ 2022-23ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಲಕ್ಷ್ಮೀ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ರವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧಿಕಾರಿ ಉಪಸ್ಥಿತರಿದ್ದರು.

## 10th Batch (DUCBM) ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ. ಈಗಾಗಲೇ 8ಬ್ಯಾಚ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 9ನೇ ಬ್ಯಾಚ್‌ನ ಫಲಿತಾಂಶ ಸದ್ಯದಲ್ಲಿಯೇ ಬರಲಿದ್ದು, ಈಗ 10ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮಹಾಮಂಡಳವು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸಂಪರ್ಕ ತರಗತಿಗಳನ್ನು ಮತ್ತು ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಪ್ರಯುಕ್ತ, ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು ಸದರಿ ಕೋರ್ಸ್‌ಗೆ ನೋಂದಣಿ ಮಾಡಿಸುವಾಗ ಯಾವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದೀರೆಂದು ಕಡ್ಡಾಯವಾಗಿ ನೋಂದಣಿ ಅರ್ಜಿಯಲ್ಲಿ ತಿಳಿಸಬೇಕು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನುಕೂಲವಾಗುತ್ತದೆ ಹಾಗೂ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

ಅರ್ಜಿಯನ್ನು ಭರ್ತಿ ಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಲು ಕೊನೆಯ ದಿನಾಂಕ : 31.08.2023 ಆಗಿರುತ್ತದೆ. ಆದ್ದರಿಂದ ಕೊನೆಯ ದಿನದವರೆಗೆ ಕಾಯದೆ ಬೇಗನೆ ಅರ್ಜಿಗಳನ್ನು ಭರ್ತಿಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಬೇಕು. ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.4,500+(ಜಿಎಸ್‌ಟಿ) 810 = ಒಟ್ಟು ರೂ. 5,310/-ಗಳನ್ನು ನಿಗದಿಪಡಿಸಲಾಗಿದೆ. ಈಗಾಗಲೇ ತಮ್ಮ ಬ್ಯಾಂಕಿನ ಇ-ಮೇಲ್ ವಿಳಾಸಕ್ಕೆ ಕೋರ್ಸ್‌ಗೆ ಸಂಬಂಧಿಸಿದ ಅರ್ಜಿ ಫಾರಂ ಮತ್ತು ವಿವರಗಳನ್ನು ಕಳುಹಿಸಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಶ್ರೀನಿವಾಸ್ ಹೆಚ್.ಸಿ. (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

## ಕುಮಟಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



**ಕುಮಟಾ :** ದಿನಾಂಕ : 24-07-2023 ರಂದು ನಡೆದ ದಿ ಕುಮಟಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಇದರ ಚುನಾವಣೆಯಲ್ಲಿ ಶ್ರೀ ರಾಮನಾಥ ಶ್ರೀಧರ ಶಾನಭಾಗ, ಶ್ರೀ ಮುಕುಂದ ಬಾಬು ಶಾನಭಾಗ, ಶ್ರೀ ಸದಾನಂದ ಗಂಗಾಧರ ಕಾಮತ, ಶ್ರೀ ಅಶೋಕ ದಾಮೋದರ ಶಾನಭಾಗ, ಶ್ರೀ ಚಂದ್ರಕಾಂತ ಮಂಜುನಾಥ ಶಾನಭಾಗ, ಶ್ರೀ ಪ್ರಶಾಂತ ವೆಂಕಟೇಶ ನಾಯ್ಕ, ಶ್ರೀಮತಿ ಲೀಲಾವತಿ ನಾಗೇಶ ಭಂಡಾರಿ, ಶ್ರೀ ವಸಂತ ಗಣಪತಿ ಹುಲ್ಸವಾರ, ಶ್ರೀಮತಿ ಸುಧಾ ಬೀರಪ್ಪ ಗೌಡ, ಶ್ರೀ ರಾಘವೇಂದ್ರ ಪಾಂಡುರಂಗ ನಾಯಕ, ಶ್ರೀ ಜಯವಂತ ಸಾರಿಂಗ ನಾಯ್ಕ, ಶ್ರೀಮತಿ ಸುನೀತಾ ರಾಯಾ ಕಾಮತ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಹಾಗೂ ದಿನಾಂಕ 07-08-2023 ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಸತತ ಮೂರನೇ ಬಾರಿ ಅಧ್ಯಕ್ಷರಾಗಿ ಶ್ರೀ ರಾಮನಾಥ ಶ್ರೀಧರ ಶಾನಭಾಗ ರವರು ಆಯ್ಕೆಯಾಗಿರುತ್ತಾರೆ ಹಾಗೂ ಮೊದಲಬಾರಿಗೆ ಉಪಾಧ್ಯಕ್ಷರಾಗಿ ಶ್ರೀ ಪ್ರಶಾಂತ ವೆಂಕಟೇಶ ನಾಯ್ಕ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

# 2000 ರೂಪಾಯಿ ನೋಟು ಹಿಂತೆಗೆತ : ಚಲಾವಣೆಯಲ್ಲಿದ್ದ ಕರೆನ್ಸಿ ಮೊತ್ತ ರೂ. 1.54 ಲಕ್ಷ ಕೋಟಿ ನಷ್ಟು ಇಳಿಕೆ

**ನವದೆಹಲಿ :** 2000 ರೂಪಾಯಿ ನೋಟನ್ನು ಆರ್‌ಬಿಐ ಹಿಂಪಡೆಯುತ್ತಿರುವುದರ ಪರಿಣಾಮ ಚಲಾವಣೆಯಲ್ಲಿದ್ದ ಕರೆನ್ಸಿಗಳು 1.54 ಲಕ್ಷ ಕೋಟಿ ರೂಪಾಯಿಯಷ್ಟು ಕುಸಿತ ಕಂಡಿದೆ. ಇದು ಜುಲೈ. 28 ವರೆಗಿನ ಅಂಕಿ-ಅಂಶವಾಗಿದೆ. ಈ ಕುಸಿತಕ್ಕೆ 2000 ರೂಪಾಯಿ ಮುಖಬೆಲೆಯ ನೋಟುಗಳ ಹಿಂತೆಗೆತವೇ ಸಂಪೂರ್ಣ ಕಾರಣವಲ್ಲ ಎಂದೂ ವಿಶ್ಲೇಷಿಸಲಾಗುತ್ತಿದೆ. ಇದೇ ರೀತಿಯ ಮಧ್ಯ ವಾರ್ಷಿಕ ಕುಸಿತದ ಟ್ರೆಂಡ್ ಈ ಹಿಂದಿನ ವರ್ಷಗಳಲ್ಲೂ ಕಂಡುಬಂದಿತ್ತು.




ಆದರೆ ಕಳೆದ ವರ್ಷಗಳಿಗೆ ಹೋಲಿಕೆ ಮಾಡಿದರೆ, ಈ ವರ್ಷ ಕುಸಿತದ ಪ್ರಮಾಣ ತುಸು ಹೆಚ್ಚಾಗಿಯೇ ಇದ್ದು, ಈ ಹೆಚ್ಚಾಗಿರುವುದರ ಪರಿಣಾಮದ ಹಿಂದಿನ ಕಾರಣ 2000 ರೂಪಾಯಿ ಮುಖಬೆಲೆಯ ನೋಟುಗಳ ಹಿಂತೆಗೆತ ಎಂದು ಹೇಳಲಾಗುತ್ತಿದೆ.

2022ರಲ್ಲಿ ಮೇ.20 ಹಾಗೂ ಜು.29 ಅವಧಿಯಲ್ಲಿ ಒಟ್ಟು ಕರೆನ್ಸಿಯಲ್ಲಿನ ಚಲಾವಣೆ 41,000 ಕೋಟಿ ರೂಪಾಯಿಗಳಷ್ಟು ಕುಸಿತ ಕಂಡಿತ್ತು. 2021ರಲ್ಲಿ ಮೇ.21– ಜು.30 ಅವಧಿಯಲ್ಲಿ 17,000 ಕೋಟಿ ರೂಪಾಯಿಗಳಷ್ಟು ಕುಸಿತ ಕಂಡಿತ್ತು. ಆದರೆ ಈ ವರ್ಷ ಒಟ್ಟು ಚಲಾವಣೆಯಲ್ಲಿರುವ ಕರೆನ್ಸಿಯ ಪೈಕಿ ಶೇ.4.4 ರಷ್ಟು ಕುಸಿತ ದಾಖಲಾಗಿದೆ.

ನಿಖರ ಅಂಕಿ-ಅಂಶಗಳ ಪ್ರಕಾರ, ಮೇ.19ರವರೆಗೆ 34.78 ಲಕ್ಷ ಕೋಟಿ ರೂಪಾಯಿಯಷ್ಟಿದ್ದ ಕರೆನ್ಸಿ ಚಲಾವಣೆ ಜು.28 ವೇಳೆಗೆ 2000 ರೂಪಾಯಿ ಮುಖಬೆಲೆಯ ನೋಟುಗಳ ಹಿಂತೆಗೆತ ಘೋಷಣೆಯ ಬಳಿಕ 33.24 ಲಕ್ಷ ಕೋಟಿಗಳಿಗೆ ಇಳಿಕೆಯಾಯಿತು ಎಂದು ತಿಳಿದುಬಂದಿದೆ.

# ಇಂಟರ್‌ನೆಟ್ ಇಲ್ಲದೆಯೂ ಯುಪಿಐ ಮೂಲಕ ರೂ.500 ವರೆಗೆ ಹಣ ಪಾವತಿಗೆ ಅವಕಾಶ ಕಲ್ಪಿಸಿದ ಆರ್‌ಬಿಐ

**ನವದೆಹಲಿ :** ಯುಪಿಐ ಸೇವೆಗಳಲ್ಲಿ ಹಲವು ಹೊಸ ಆಯ್ಕೆಗಳನ್ನು ಪರಿಚಯಿಸಲು ಆರ್‌ಬಿಐ ತೀರ್ಮಾನಿಸಿದೆ. ಈ ಮೂಲಕ ಈಗಾಗಲೇ ಜನಪ್ರಿಯವಾಗಿರುವ ಯುಪಿಐಯನ್ನು ಮತ್ತಷ್ಟು ಜನಸ್ನೇಹಿಯಾಗಿಸುವತ್ತ ಹೆಜ್ಜೆ ಇಟ್ಟಿದೆ. 'ಯುಪಿಐ ಲೈಟ್'ನಲ್ಲಿ ಸಂಭಾಷಣಾ ಪಾವತಿ ಹಾಗೂ ಆಫ್‌ಲೈನ್ ಕಾರ್ಯನಿರ್ವಹಣೆಯನ್ನು ಆರ್‌ಬಿಐ ಪರಿಚಯಿಸಿದೆ.




ಕೇಂದ್ರೀಯ ಬ್ಯಾಂಕ್ ಯುಪಿಐ ಲೈಟ್ ಮೂಲಕ ಪಾವತಿ ಮಿತಿಯನ್ನು 200 ರೂ.ನಿಂದ 500 ರೂ.ಗೂ ಏರಿಕೆ ಮಾಡಿದೆ. ಅಂದರೆ ಇಂಟರ್‌ನೆಟ್ ಇಲ್ಲದೆಯೂ ಯುಪಿಐ ಮೂಲಕ 500 ರೂ. ಹಣವನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಾವತಿ ಮಾಡಬಹುದಾಗಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಈ ಮಹತ್ವದ ಸಂಗತಿಯನ್ನು ಪ್ರಕಟಿಸಿದ್ದಾರೆ.

"ಬಳಕೆದಾರರಿಗೆ ಡಿಜಿಟಲ್ ಪಾವತಿಗಳ ಅನುಭವವನ್ನು ಹೆಚ್ಚಿಸಲು ಹೊಸ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ಮೊದಲನೆಯದಾಗಿ ಯುಪಿಐನಲ್ಲಿ 'ಸಂಭಾಷಣಾ ಪಾವತಿ'ಗಳನ್ನು ಸಕ್ರಿಯಗೊಳಿಸಲು ಪ್ರಸ್ತಾಪಿಸಲಾಗಿದೆ. ಇದು ಪಾವತಿಗಳನ್ನು ಮಾಡಲು ಎಐ – ಚಾಲಿತ ವ್ಯವಸ್ಥೆಗಳೊಂದಿಗೆ ಸಂವಾದದಲ್ಲಿ ತೊಡಗಿಸಿಕೊಳ್ಳಲು ಬಳಕೆದಾರರಿಗೆ ಅನುವು ಮಾಡಿಕೊಡುತ್ತದೆ," ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ.

"ಎರಡನೆಯದಾಗಿ 'ಯುಪಿಐ-ಲೈಟ್' ಆನ್-ಡಿವೈಸ್ ವ್ಯಾಲೆಟ್ ಮೂಲಕ ನಿಯರ್ ಫೀಲ್ಡ್ ಕಮ್ಯುನಿಕೇಶನ್ (ಎನ್‌ಎಫ್‌ಸಿ) ತಂತ್ರಜ್ಞಾನವನ್ನು ಬಳಸಿಕೊಂಡು ಯುಪಿಐನಲ್ಲಿ ಆಫ್‌ಲೈನ್ ಪಾವತಿಗಳನ್ನು ಪರಿಚಯಿಸಲು ಉದ್ದೇಶಿಸಲಾಗಿದೆ. ಮತ್ತು ಮೂರನೆಯದ್ದಾಗಿ ಪ್ರತಿ ಪಾವತಿ ಸಾಧನಕ್ಕೆ 2,000 ರೂ.ಗಳ ಒಟ್ಟಾರೆ ಮಿತಿಯೊಳಗೆ ಆಫ್‌ಲೈನ್ ಮೋಡ್‌ನಲ್ಲಿ ಸಣ್ಣ ಮೌಲ್ಯದ ಡಿಜಿಟಲ್ ಪಾವತಿಗಳ ವಹಿವಾಟಿನ ಮಿತಿಯನ್ನು 200 ರೂ.ನಿಂದ 500 ರೂ.ಗೆ ಹೆಚ್ಚಿಸಲಾಗಿದೆ. ಈ ಉಪಕ್ರಮಗಳು ದೇಶದಲ್ಲಿ ಡಿಜಿಟಲ್ ಪಾವತಿಗಳ ವ್ಯಾಪ್ತಿಯನ್ನು ಮತ್ತು ಬಳಕೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ," ಎಂದು ಶಕ್ತಿಕಾಂತ ದಾಸ್ ವಿವರಿಸಿದ್ದಾರೆ.

# ಗೂಗಲ್ ಪೇನಲ್ಲಿ ಸಿಬಿಲ್ ಸ್ಕೋರ್ ನೋಡುವುದು ಹೇಗೆ?

**CIBIL ಸ್ಕೋರ್ ಎಂಬುದು 300 ಮತ್ತು 900 ನಡುವಿನ ಮೂರು-ಅಂಕಿಯ ಸಂಖ್ಯೆಗಳು. ಅದು ನಿಮ್ಮ ಸಾಲದ ಅರ್ಹತೆಯನ್ನು ಪ್ರತಿಬಿಂಬಿಸುತ್ತದೆ. ನಿಮ್ಮ ಸಾಲ ಮರುಪಾವತಿ ಸಾಮರ್ಥ್ಯದ ಆಧಾರದ ಮೇಲೆ ಇದನ್ನು ಲೆಕ್ಕ ಹಾಕಲಾಗುತ್ತದೆ. 700ಕ್ಕಿಂತ ಹೆಚ್ಚಿನ ಸ್ಕೋರ್ ಅನ್ನು ಸಾಮಾನ್ಯವಾಗಿ ಉತ್ತಮವೆಂದು ಪರಿಗಣಿಸಲಾಗುತ್ತದೆ. ಕಡಿಮೆ ಸ್ಕೋರ್ ಇದೆ ಎಂದರೆ ಅವರು ಅಪಾಯಕಾರಿ ಸಾಲಗಾರ ಎಂದರ್ಥ. ಸಿಬಿಲ್ ಸ್ಕೋರ್ ವರದಿ ನಿಮ್ಮ ವೈಯಕ್ತಿಕ ಮಾಹಿತಿ, ಉದ್ಯೋಗದ ವಿವರ, ಬ್ಯಾಂಕ್ ಖಾತೆ ಮತ್ತು ಹಳೆಯ ಸಾಲದ ಮಾಹಿತಿಯನ್ನೊಳಗೊಂಡಿರುತ್ತದೆ. ಯಾವುದೇ ಬ್ಯಾಂಕಿನಲ್ಲಿ ನೀವು ಸಾಲ ಅಥವಾ ಕ್ರೆಡಿಟ್ ಕಾರ್ಡ್ ಪಡೆಯಲು ಬಯಸಿದರೆ ಬ್ಯಾಂಕು ಅಥವಾ ಯಾವುದೇ ಹಣಕಾಸು ಸಂಸ್ಥೆಗಳು ಮೊದಲು ನಿಮ್ಮ ಸಿಬಿಲ್ ಸ್ಕೋರ್ ಪರಿಶೀಲನೆ ನಡೆಸುತ್ತವೆ.**




ಡಿಜಿಟಲ್ ಹಣಕಾಸಿನ ವ್ಯವಹಾರ ದೇಶದಲ್ಲಿ ಜನಪ್ರಿಯವಾಗುತ್ತಿದ್ದಂತೆಯೇ ಸಾಕಷ್ಟು ಹಣಕಾಸು ವಹಿವಾಟುಗಳ ಆ್ಯಪ್‌ಗಳು ಬಂದಿವೆ. ಅದರಲ್ಲಿ ಗೂಗಲ್ ಪೇ ಕೂಡಾ ಒಂದು. ಗೂಗಲ್ ಯುನಿಫೈಡ್ಪೇಮೆಂಟ್ ಇಂಟರ್ಫೇಸ್ (ಯುಪಿಐ) ಆ್ಯಪ್‌ಗಳು ಇದು. ತ್ವರಿತ ಪಾವತಿ, ಹಣ ವರ್ಗಾವಣೆಗೆ ಈ ಆ್ಯಪ್‌ಗಳು ಸಹಕಾರಿಯಾಗಿದೆ.

ಇದು ಬಳಕೆದಾರರಿಗೆ ಆನ್‌ಲೈನ್‌ನಲ್ಲಿ ಶಾಪಿಂಗ್ಗೆ, ಬಿಲ್‌ಗಳನ್ನು ಪಾವತಿಸಲು, ಮೊಬೈಲ್ ರೀಚಾರ್ಜ್ ಮಾಡಲು ಅಥವಾ ತ್ವರಿತವಾಗಿ ತಮ್ಮ ಬ್ಯಾಂಕ್ ಖಾತೆಯಿಂದ ಇತರರಿಗೆ ಹಣ ಕಳುಹಿಸಲು ಅಥವಾ ಇತರರಿಂದ ತಮ್ಮ ಖಾತೆಗೆ ನೇರವಾಗಿ ಹಣ ಸ್ವೀಕರಿಸಲು ಇದು ನೆರವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಗೂಗಲ್ ಪೇ ಸೇರಿದಂತೆ ಇತರ ಆ್ಯಪ್‌ಗಳು ಸಾಕಷ್ಟು ಜನಪ್ರಿಯತೆ ಗಳಿಸಿವೆ. ಯುಪಿಐ ಐಡಿ, ಕ್ಯೂಆರ್ ಕೋಡ್, ಅಡ್ರೆಸ್, ಅಕೌಂಟ್ ನಂಬರ್, ಮೊಬೈಲ್ ಸಂಖ್ಯೆಯ ಮೂಲಕವೂ ವಹಿವಾಟು ನಡೆಸಲು ಈ ಅಪ್ಲಿಕೇಷನ್‌ಗಳ ಬಳಕೆದಾರರಿಗೆ ಅವಕಾಶದೊರೆಯುತ್ತದೆ.

ಇಷ್ಟು ಮಾತ್ರವಲ್ಲ, ಗೂಗಲ್ ಪೇ ಕ್ರೆಡಿಟ್ ರಿಪೋರ್ಟ್ ಅಥವಾ ಸಿಬಿಲ್ ಸ್ಕೋರ್ಪಡೆಯುವುದಕ್ಕೂ ಬಳಕೆದಾರರಿಗೆ ನೆರವಾಗುತ್ತದೆ. ಗೂಗಲ್ ಪೇ ಈ ವೈಶಿಷ್ಟ್ಯವನ್ನೂ ಹೊಂದಿದೆ. ಅದೂ ಅಲ್ಲದೆ, ಬಳಕೆದಾರರು ಗೂಗಲ್ ಪೇನಲ್ಲಿ ಸಿಬಿಲ್ ಸ್ಕೋರ್ ಪಡೆದಾಗ, ಈ ಕ್ರೆಡಿಟ್ ಸ್ಕೋರ್ ಅನ್ನು ಸುಧಾರಿಸಲು ಏನು ಮಾಡಬೇಕು ಎಂಬುದರ ಕುರಿತ ಶಿಫಾರಸ್ಸನ್ನೂ ಇದು ನೀಡುತ್ತದೆ.

**ಏನಿದು ಸಿಬಿಲ್ ಸ್ಕೋರ್...?**

CIBIL ಸ್ಕೋರ್ ಎಂಬುದು 300 ಮತ್ತು 900 ನಡುವಿನ ಮೂರು-ಅಂಕಿಯ ಸಂಖ್ಯೆಗಳು. ಅದು ನಿಮ್ಮ ಸಾಲದ ಅರ್ಹತೆಯನ್ನು ಪ್ರತಿಬಿಂಬಿಸುತ್ತದೆ. ನಿಮ್ಮ ಸಾಲ ಮರುಪಾವತಿ ಸಾಮರ್ಥ್ಯದ ಆಧಾರದ ಮೇಲೆ ಇದನ್ನು ಲೆಕ್ಕ ಹಾಕಲಾಗುತ್ತದೆ. 700ಕ್ಕಿಂತ ಹೆಚ್ಚಿನ ಸ್ಕೋರ್ ಅನ್ನು ಸಾಮಾನ್ಯವಾಗಿ ಉತ್ತಮವೆಂದು ಪರಿಗಣಿಸಲಾಗುತ್ತದೆ. ಕಡಿಮೆ ಸ್ಕೋರ್ ಇದೆ ಎಂದರೆ ಅವರು ಅಪಾಯಕಾರಿ ಸಾಲಗಾರ ಎಂದರ್ಥ. ಸಿಬಿಲ್ ಸ್ಕೋರ್ ವರದಿ ನಿಮ್ಮ ವೈಯಕ್ತಿಕ ಮಾಹಿತಿ, ಉದ್ಯೋಗದ ವಿವರ, ಬ್ಯಾಂಕ್ ಖಾತೆ ಮತ್ತು ಹಳೆಯ ಸಾಲದ ಮಾಹಿತಿಯನ್ನೊಳಗೊಂಡಿರುತ್ತದೆ. ಯಾವುದೇ ಬ್ಯಾಂಕಿನಲ್ಲಿ ನೀವು ಸಾಲ ಅಥವಾ ಕ್ರೆಡಿಟ್ ಕಾರ್ಡ್ ಪಡೆಯಲು ಬಯಸಿದರೆ ಬ್ಯಾಂಕು ಅಥವಾ ಯಾವುದೇ ಹಣಕಾಸು ಸಂಸ್ಥೆಗಳು ಮೊದಲು ನಿಮ್ಮ ಸಿಬಿಲ್ ಸ್ಕೋರ್ ಪರಿಶೀಲನೆ ನಡೆಸುತ್ತವೆ.

ಈ ಮೂಲಕ ಬ್ಯಾಂಕುಗಳು ಒಬ್ಬರ ಸಾಲ ಮರುಪಾವತಿ ಸಾಮರ್ಥ್ಯವನ್ನು ನಿರ್ಣಯಿಸುತ್ತದೆ. ಹೆಚ್ಚಿನ ಸಿಬಿಲ್ ಸ್ಕೋರ್ಎಂದರೆ ಬಳಕೆದಾರರು ಲೋನ್ ಶೀಘ್ರದಲ್ಲಿ ಅನುಮೋದನೆ ಪಡೆಯುವ ಸಾಧ್ಯತೆ ಹೆಚ್ಚು. ಜೊತೆಗೆ ಕಡಿಮೆ ಬಡ್ಡಿ ದರ ಕೂಡಾ ಸಿಗುವ ಸಾಧ್ಯತೆಯೂ ಇರುತ್ತದೆ.

ಇನ್ನೂ ಗೂಗಲ್ ಪೇನಲ್ಲೂ ಸಿಬಿಲ್ ಸ್ಕೋರ್ ಪರಿಶೀಲನೆ ಮಾಡಬಹುದು. ಅದಕ್ಕೆ ಇಲ್ಲಿದೆ ಸಿಬಿಲ್ ಸ್ಕೋರ್ ನೋಡುವ ಹಂತಗಳ ಮಾಹಿತಿ.

- ನಿಮ್ಮ ಫೋನ್ನಲ್ಲಿ ಗೂಗಲ್ ಪೇ ಅಪ್ಲಿಕೇಶನ್ ತೆರೆಯಿರಿ.
- 'ಮ್ಯಾನೇಜ್ಯುವರ್ ಮನಿ' ಟ್ಯಾಬ್ ಅನ್ನು ಕ್ಲಿಕ್ ಮಾಡಿ.
- ಕೆಳಗೆ ಸ್ಕ್ರಾಲ್ ಮಾಡಿ ಮತ್ತು 'ನಿಮ್ಮ ಸಿಬಿಲ್ ಸ್ಕೋರ್ ಅನ್ನು ಉಚಿತವಾಗಿ ಪರಿಶೀಲಿಸಿ' ಎಂಬ ಆಯ್ಕೆಯನ್ನು ಕ್ಲಿಕ್ ಮಾಡಿ.
- ನಿಮ್ಮ ಪ್ಯಾನ್ ಕಾರ್ಡ್ನಲ್ಲಿ ಇರುವಂತೆ ನಿಮ್ಮ ಮೊದಲ ಹೆಸರು ಮತ್ತು ಕೊನೆಯ ಹೆಸರನ್ನು ನಮೂದಿಸಿ.
- 'ಮುಂದುವರಿಸಿ' ಎಂಬ ಆಯ್ಕೆಯನ್ನು ಕ್ಲಿಕ್ ಮಾಡಿ.
- ಇದಾದ ಬಳಿಕ ನಿಮ್ಮ ಗುರುತನ್ನು ವೆರಿಫೈ ಮಾಡಲು ಕೇಳಲಾಗುತ್ತದೆ. ಇಲ್ಲಿ ನೀವು ನಿಮ್ಮ ಮೊಬೈಲ್ ಸಂಖ್ಯೆ ಅಥವಾ ಇಮೇಲ್ ವಿಳಾಸವನ್ನು ನಮೂದಿಸಬಹುದು.
- ನಿಮ್ಮ ಗುರುತಿನ ವೆರಿಫಿಕೇಷನ್ ಆದ ಬಳಿಕ ನಿಮ್ಮ ಸಿಬಿಲ್ ಸ್ಕೋರ್ ಅಲ್ಲಿ ಕಾಣಿಸುತ್ತದೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಸಾಲದ ಪ್ರಸ್ತಾಪಗಳು ಮೊದಲು ಲೋನ್ ಕಮೀಟಿಯ ಮುಂದೆ ಬಂದು, ಲೋನ್ ಕಮೀಟಿಯ ಶಿಫಾರಸಿನೊಂದಿಗೆ ಆಡಳಿತ ಮಂಡಳಿಗೆ ಮಂಜೂರಾತಿಗಾಗಿ ಬರುತ್ತದೆ. ಮಂಡಳಿ ಸಾಲ ಮಂಜೂರು ಮಾಡಿದ ನಂತರ ಸಾಲ ವಿತರಣೆಯಾಗುತ್ತದೆ. ಕಳೆದ ತಿಂಗಳಿನಿಂದ ನಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (ಬಿಒಎಂ) ಕಾರ್ಯನಿರ್ವಹಿಸುತ್ತಿದ್ದು, ತನ್ನ ಅಧಿಕಾರ ಆಡಳಿತ ಮಂಡಳಿಯ ಅಧಿಕಾರಕ್ಕೆ ಸರಿಸಮವಾಗಿದ್ದು, ಮಂಡಳಿ ಮಂಜೂರು ಮಾಡಿದ ಸಾಲದ ಪ್ರಸ್ತಾಪಗಳು ವಿತರಣೆಗೆ ಮುನ್ನ ಬಿ.ಒ.ಎಂ ನ ಮಂಜೂರಾತಿಗೆ ಸಲ್ಲಿಸಬೇಕು ಎಂದು ಆದೇಶ ನೀಡಿದೆ. ಈ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯನ್ನು ಉಲ್ಲೇಖಿಸಿ ಸರಿಯಾದ ಮಾರ್ಗದರ್ಶನ ಮಾಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಪಟ್ಟಣ ಸಹಕಾರ ಬ್ಯಾಂಕುಗಳು ಸೇರಿ, ಎಲ್ಲಾ ಬ್ಯಾಂಕುಗಳು ಸಾಲ ಮಂಜೂರಾತಿಯಲ್ಲಿ ಸ್ಪರ್ಧಾತ್ಮಕವಾಗಿರಲು ಲೋನ್ ಕಮೀಟಿಗೆ, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಶಾಖಾ ವ್ಯವಸ್ಥಾಪಕರಿಗೆ ನಿಶ್ಚಿತ ಪ್ರಮಾಣದ ಸಾಲಗಳನ್ನು ಮಂಜೂರು ಮಾಡಲು ಆಡಳಿತ ಮಂಡಳಿ ಅಧಿಕಾರವನ್ನು ನಿಯೋಜಿಸುತ್ತದೆ (Delegate Power). ಅದರಂತೆ, ಪ್ರತಿಯೊಬ್ಬರೂ ತಮಗೆ ನಿಯೋಜಿಸಲಾದ ಅಧಿಕಾರದ ವ್ಯಾಪ್ತಿಯಲ್ಲಿ ಸಾಲಗಳನ್ನು ಮಂಜೂರು ಮಾಡಿ, ಆಡಳಿತ ಮಂಡಳಿಯ ಒಪ್ಪಿಗೆ ಇಲ್ಲದೆಯೇ ನೇರವಾಗಿ ಸಾಲ ವಿತರಣೆ ಮಾಡಬಹುದಾಗಿದೆ. ನಿಮಗೆ ಗೊತ್ತಿರುವಂತೆ, ಶಾಖಾ ವ್ಯವಸ್ಥಾಪಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ತಮ್ಮ ನಿಯೋಜಿತಾಧಿಕಾರದ ವ್ಯಾಪ್ತಿಯಲ್ಲಿ ನೇರವಾಗಿ ಸಾಲ ಮಂಜೂರು ಮಾಡಿ, ವಿತರಣೆಯನ್ನು ಮಾಡುತ್ತಾರೆ. ಈ ರೀತಿ ಮಂಜೂರಾದ ಸಾಲಗಳನ್ನು ಮುಂದಿನ ಆಡಳಿತ ಮಂಡಳಿ ಸಭೆಯ ಗಮನಕ್ಕೆ ತರಲಾಗುವುದು. ಇದೇ ವ್ಯವಸ್ಥೆ ಲೋನ್ ಕಮೀಟಿಯ ನಿಯೋಜಿತಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸಾಲಗಳ ಪ್ರಸ್ತಾಪಕ್ಕೂ ಅನ್ವಯಿಸುತ್ತದೆ. ಉದಾಹರಣೆಗೆ, ಆಡಳಿತ ಮಂಡಳಿ ಸಭೆ ತಿಂಗಳಿಗೊಮ್ಮೆ ನಡೆಯುತ್ತದೆ. ಸಾಲ ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ಲೋನ್ ಕಮೀಟಿಗೆ ರೂ.ಒಂದು ಕೋಟಿವರೆಗಿನ ಮೊತ್ತದ ಸಾಲವನ್ನು ಮಂಜೂರು ಮಾಡಲು ಅಧಿಕಾರವನ್ನು ಆಡಳಿತ ಮಂಡಳಿ ನಿಯೋಜಿಸುತ್ತದೆ. ಲೋನ್ ಕಮೀಟಿಯ ಸದಸ್ಯರ ಸಂಖ್ಯೆ ಕಡಿಮೆ ಇರುವುದರಿಂದ ಅದು ವಾರಕ್ಕೊಮ್ಮೆ ಸೇರಿ ಒಂದು ಕೋಟಿ ರೂಪಾಯಿವರೆಗಿನ ಸಾಲಗಳನ್ನು ಮಂಜೂರು ಮಾಡುವುದಲ್ಲದೇ ಮಂಜೂರಾದ ಸಾಲಗಳು ಆಡಳಿತ ಮಂಡಳಿಯ ಒಪ್ಪಿಗೆ ಇಲ್ಲದೆ ನೇರವಾಗಿ ವಿತರಣೆಗೆ ಸಿದ್ಧವಾಗಿರುತ್ತವೆ. ನಿಮ್ಮ ಬ್ಯಾಂಕಿನ ಲೋನ್ ಕಮೀಟಿಗೆ ನಿರ್ದಿಷ್ಟ ಸಾಲ ಮಂಜೂರಾತಿ ಅಧಿಕಾರವನ್ನು ನೀಡಿರುವ ಬಗ್ಗೆ ನೀವು ಏನೂ ಹೇಳಿಲ್ಲ. ಏನಿದ್ದರೂ ನಿಮ್ಮ ಬ್ಯಾಂಕಿನಲ್ಲಿ ಅನುಸರಿಸುವ ಕ್ರಮ ರಿಜರ್ವ್ ಬ್ಯಾಂಕಿನ ಬಿ.ಒ.ಎಂ ಸಂಬಂಧಿತ ದಿನಾಂಕ: ಡಿಸೆಂಬರ್ 31, 2019ರ ಸುತ್ತೋಲೆಯ ಪ್ಯಾರ 10ರಲ್ಲಿ ಕಲ್ಪಿಸಲಾದ ವ್ಯವಸ್ಥೆಗೆ ವ್ಯತಿರಿಕ್ತವಾಗಿದೆ.




ರಿಜರ್ವ್ ಬ್ಯಾಂಕಿನ ಮೇಲೆ ನಮೂದಿಸಿದ ಸುತ್ತೋಲೆಯ ಪ್ಯಾರ 4 ಮತ್ತು 10ರಲ್ಲಿ ಬಿ.ಒ.ಎಂ. ಮತ್ತು ಆಡಳಿತ ಮಂಡಳಿಗಳ ಕಾರ್ಯವ್ಯಾಪ್ತಿ ಮತ್ತು ಅಧಿಕಾರಗಳ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಸಾಲ ಮಂಜೂರಾತಿ ಸೇರಿ, ಬ್ಯಾಂಕಿನ ಎಲ್ಲಾ ವ್ಯವಹಾರಗಳ ಬಗ್ಗೆ ನಿರ್ಧಾರ ಕೈಗೊಳ್ಳಲು ಆಡಳಿತ ಮಂಡಳಿ ಪೂರ್ಣ ಅಧಿಕಾರ ಹೊಂದಿದ್ದು, ಬ್ಯಾಂಕಿನ ವ್ಯವಹಾರ ಸುಸೂತ್ರವಾಗಿ ನಡೆಯಲು ತನ್ನ ಅಧಿಕಾರವನ್ನು ಇತರರೊಂದಿಗೆ ಹಂಚಿಕೊಳ್ಳುತ್ತದೆ. ಬಿ.ಒ.ಎಂ. ಕೇವಲ ಸಲಹಾ ಸಮಿತಿಯಾಗಿದ್ದು, ಅದು ಆಡಳಿತ ಮಂಡಳಿಗೆ ಸರಿ ಸಮವಲ್ಲ. ಆದ್ದರಿಂದ, ಲೋನ್ ಕಮೀಟಿಗೆ ಅಥವಾ ಆಡಳಿತ ಮಂಡಳಿಗೆ ಹೋಗುವ ಸಾಲ ಪ್ರಸ್ತಾಪಗಳು ಬಿ.ಒ.ಎಂನ ಶಿಫಾರಸಿಗೆ ಅದರ ಮುಂದೆ ಇಡಲಾಗುತ್ತದೆ. ಬಿ.ಒ.ಎಂ.ನ ಶಿಫಾರಸನ್ನು ಕಾರಣ ನೀಡಿ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಲೋನ್ ಕಮೀಟಿ / ಆಡಳಿತ ಮಂಡಳಿಗೆ ಇದೆ. ಆದ್ದರಿಂದ, ನಿಮ್ಮ ಬ್ಯಾಂಕಿನ ಬಿ.ಒ.ಎಂ.ನ ಆದೇಶ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗೆ ವ್ಯತಿರಿಕ್ತವಾಗಿದೆ.

**02. ದೊಡ್ಡ ಪಟ್ಟಣ ಸಹಕಾರ ಬ್ಯಾಂಕುಗಳ ಮೇಲೆ ಭಾರತೀಯ ರಿಜರ್ವ್ ಬ್ಯಾಂಕು ಏಕಾಏಕಿ ನಿರ್ಬಂಧ ಹೇರಿದರೆ ನಮ್ಮಂತ ಸಾಮಾನ್ಯ ಠೇವಣಿದಾರರಿಗೆ ತೊಂದರೆಯಾಗುತ್ತದೆ. ಬ್ಯಾಂಕಿನ ಆರ್ಥಿಕ ಸ್ಥಿತಿ ಹದಗೆಡುವ ಪರಿಸ್ಥಿತಿಗೆ ಬರುವ ಲಕ್ಷಣ ಕಂಡು ಬಂದಾಗ, ಸಾರ್ವಜನಿಕರಿಗೆ ಎಚ್ಚರಿಕೆ ನೀಡುವುದು ರಿಜರ್ವ್ ಬ್ಯಾಂಕಿನ ಮತ್ತು ಮಹಾಮಂಡಳದ ಕರ್ತವ್ಯವಲ್ಲವೇ?**

**– ಡಿ.ಕೆ. ಸೂರ್ಯನಾರಾಯಣ, ಬೆಂಗಳೂರು.**

**ಉತ್ತರ :** ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿವರ್ಷ ತಮ್ಮ ವಾರ್ಷಿಕ ಆಢಾವೆ ಪತ್ರದೊಂದಿಗೆ ಖಾತೆಗೆ ಸಂಬಂಧಿಸಿದ ಟಿಪ್ಪಣಿಗಳನ್ನು ಕೂಡಾ ಪ್ರಕಟಿಸುವುದು ಅವಶ್ಯಕ. ಬ್ಯಾಂಕು ಗಳಿಸಿದ ಲಾಭ ಅಥವಾ ನಷ್ಟ, ಸುಸ್ತಿ ಸಾಲದ ಪ್ರಮಾಣ, ಸ್ವಂತ ಬಂಡವಾಳ ಮುಂತಾದ ಮಾಹಿತಿಗಳು ಈ ಟಿಪ್ಪಣಿಯ ಭಾಗವಾಗಿವೆ. ರಿಜರ್ವ್ ಬ್ಯಾಂಕಿನ ತಪಾಸಣೆ ಮತ್ತು ಬ್ಯಾಂಕಿನ ಲೆಕ್ಕಪರಿಶೋಧಕರ ನಡುವೆ ಬ್ಯಾಂಕಿನ ಸುಸ್ತಿ ಸಾಲಗಳ ಪ್ರಮಾಣದ ಬಗ್ಗೆ ಗಣನೀಯ ವ್ಯತ್ಯಾಸವಿದ್ದರೆ, ಆ ಸಂಗತಿಯನ್ನು ಕೂಡಾ ಟಿಪ್ಪಣಿಯಲ್ಲಿ ನಮೂದಿಸಬೇಕು. ಸಾರ್ವಜನಿಕರು ವಿಶೇಷವಾಗಿ ಠೇವಣಿದಾರರು ಬ್ಯಾಂಕಿನ ಪ್ರಕಟಗೊಂಡ ಆರ್ಥಿಕ ಸ್ಥಿತಿಯನ್ನು ಗಮನಿಸುವುದು ಅವಶ್ಯಕ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕರಾವಳಿ ಜಿಲ್ಲೆ ಮಂಗಳೂರಿನ ಒಂದು ಕುಟುಂಬದ ಐದು–ಪೀಳಿಗೆಯ ಕುಟುಂಬದ ಸದಸ್ಯರು ಒಂದಾಗಿ ಅಂಚೆ ಇಲಾಖೆಯ ಮಹಿಳಾ ಸಮ್ಮಾನ್ ಉಳಿತಾಯ ಖಾತೆ ತೆರೆದಿದ್ದಾರೆ. ಹಿರಿ ಅಜ್ಜಿ ಸೀತಾ ಪೂಜಾರ್ತಿಗೆ 103 ವರ್ಷವಾದರೆ, ಅವರ ಪುತ್ರಿ ಸುಂದರಿ ಪೂಜಾರ್ತಿಗೆ 72, ಆಕೆಯ ಮೊಮ್ಮಗಳು ಯಮುನಾ ಪೂರ್ಜಾರ್ತಿ 50, ಆಕೆಯ ಮರಿ ಮೊಮ್ಮಗಳು ಪವಿತ್ರಾ ವಿ ಅಮೀನ್ 33 ಮತ್ತು ಅವರ ಮಗಳು ದಿತ್ಯಾ ವಿ ಅಮೀನ್‌ಗೆ 3 ವರ್ಷ.
- ಸಿದ್ದವ್ವನದುರ್ಗ ಗ್ರಾಮದ ಪ್ರಗತಿಪರ ರೈತ ಚನ್ನಬಸಪ್ಪ ಅವರು ಸೌರಶಕ್ತಿ ಚಾಲಿತ ಮಿನಿ ಟ್ರ್ಯಾಕ್ಟರ್ ಬಳಸಿ ಹೊಲದಲ್ಲಿ ವಿವಿಧ ಬೆಳೆಗಳನ್ನು ಬೆಳೆದು ಯಶಸ್ವಿಯಾಗಿದ್ದಾರೆ.
- ಬೆಂಗಳೂರಿನ ಸಂಸ್ಥೆಯೊಂದರಲ್ಲಿ ದತ್ತಾಂಶ ವಿಜ್ಞಾನಿಯಾಗಿ ಉದ್ಯೋಗದಲ್ಲಿರುವ ಆಶಾ ಎಲ್. ಇ. ಅವರು ಹಿಂದುಳಿದ ಕಾಡುಗೊಲ್ಲ ಸಮುದಾಯದ ಮಹಿಳೆಯಾಗಿದ್ದು, ಎಂಎಸ್ಸಿ ಗಣಿತ ವಿಭಾಗದಲ್ಲಿ ಮೊದಲ ರ್‍ಯಾಂಕ್‌ನೊಂದಿಗೆ ಮೂರು ಚಿನ್ನದ ಪದಕ ಗಳಿಸಿದ್ದಾರೆ.
- ರಾಜಾಜಿನಗರದಲ್ಲಿರುವ ಜಲಮಂಡಳಿಯ ವಸತಿ ಗೃಹದ ಆವರಣದಲ್ಲಿ 10 ವರ್ಷಕ್ಕಿಂತ ಹಳೆಯದಾದ 10 ಶ್ರೀಗಂಧದ ಮರಗಳಿದ್ದು ಅವುಗಳನ್ನು ಕದಿಯಲು ಕಳ್ಳರು ಮಾಡಿದ ಪ್ರಯತ್ನವನ್ನು ಬೀದಿ ನಾಯಿಗಳು ವಿಫಲಗೊಳಿಸಿವೆ.
- ವಿಟಮಿನ್ ಡಿ ಕೊರತೆಯಿಂದ ರೋಗನಿರೋಧಕ ಶಕ್ತಿ ಕಡಿಮೆಯಾದ ರೋಗಿಗಳ ಮೇಲೆ ತೀವ್ರವಾದ ಮದ್ರಾಸ್ ಐ ಕಂಜಂಕ್ಟಿವಿಟಿಸ್ ವೈರಸ್ ಪ್ರಕರಣಗಳು ಪರಿಣಾಮ ಬೀರುತ್ತಿವೆ ಎಂದು ತಜ್ಞರು ಹೇಳಿದ್ದಾರೆ.
- ಲಕ್ಷಿತಾ ಎಂಬ ಬಾಲಕಿ ಪಾಲಕರೊಂದಿಗೆ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ರಾತ್ರಿ 8 ಗಂಟೆ ಸಮಯದಲ್ಲಿ ಮೆಟ್ಟಿಲು ಏರುತ್ತಿರುವಾಗ ಚಿರತೆಯೊಂದು ಬಾಲಕಿಯ ಮೇಲೆ ದಾಳಿ ಮಾಡಿ, ಹತ್ತಿರದ ಅರಣ್ಯದೊಳಗೆ ಎಳೆದೊಯ್ದು ತಿಂದಿರುವ ಆಘಾತಕಾರಿ ಘಟನೆ ವರದಿಯಾಗಿದೆ.
- 1947ರಲ್ಲಿ ನಮ್ಮ ದೇಶ ಇಬ್ಭಾಗವಾಗುವ ಮೊದಲಿನಿಂದಲೂ ಕಾಶ್ಮೀರದ ಕೆರಾನ್ ಗಡಿ ನಿಯಂತ್ರಣ ರೇಖೆಯ ಬಳಿ ಒಂದು ಐತಿಹಾಸಿಕ ಅಂಚೆ ಕಚೇರಿ ಕಾರ್ಯನಿರ್ವಹಿಸುತ್ತಿದ್ದು, ಇದರ ಪಿನ್ ಕೋಡ್ 193224 ಆಗಿದೆ, ಇದನ್ನು ಇತ್ತೀಚಿನವರೆಗೂ ದೇಶದ ಕೊನೆಯ ಅಂಚೆ ಕಚೇರಿ ಎಂದು ಕರೆಯಲಾಗುತಿತ್ತು ಈಗ ಇದನ್ನು ದೇಶದ ಮೊದಲ ಅಂಚೆ ಕಚೇರಿ ಎಂದು ಕರೆಯಲಾಗುತ್ತಿದೆ.

## ಓದುಗರ ಅನಿಸಿಕೆ...




**ವಿಶ್ವದ ಪ್ರಬಲ ಆರ್ಥಿಕ ಶಕ್ತಿ! :** ಡಾಲರ್ ಎದುರು ನಮ್ಮ ರೂಪಾಯಿ ಮೌಲ್ಯ ಮತ್ತೆ ಕುಸಿಯುವ ಮೂಲಕ 82 ರೂಪಾಯಿಗೆ ತಲುಪಿದೆ. ಆದರೂ, ನಮ್ಮ ನೇತಾರರು ತಮಗೆ ಸಿಕ್ಕ ಎಲ್ಲಾ ವೇದಿಕೆಗಳ ಮೇಲಿಂದ ನಮ್ಮ ದೇಶದ ಆರ್ಥಿಕತೆ ಅತ್ಯಂತ ವೇಗದಲ್ಲಿದೆ ವಿಶ್ವದ ಇತರೆ ದೇಶಗಳ ಹಿಂದಿಕ್ಕಿ ಮುಂದಿನ ಸ್ಥಾನಕ್ಕೆ ಸಾಗುತ್ತಿದೆ, ನಮ್ಮ ದೇಶ ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದು ಹೇಳುತ್ತಲೇ ಇರುತ್ತಾರೆ!

**▸▸ ನಾರಾಯಣರಾವ್ ಎಂ., ಬಳ್ಳಾರಿ**

**ಬ್ಯಾಂಕ್ ಗ್ರಾಹಕರನ್ನು ರಕ್ಷಿಸಬೇಕಿದೆ :** ನಿಮ್ಮ ತೆರಿಗೆ ಮರುಪಾವತಿಯನ್ನು ಜಮಾ ಮಾಡಲು ನಿಮ್ಮ ಬ್ಯಾಂಕ್ ಖಾತೆಯ ವಿವರ ನೀಡಿ ಎಂದು ವಂಚನೆ ಮಾಡುವವರ ಬಗ್ಗೆ ಪಿಐಬಿ ಫ್ಯಾಕ್ಟ್‌ಚೆಕ್ ಎಚ್ಚರಿರುವುದು ಸರಿಯಷ್ಟೆ. ಇತ್ತೀಚೆಗೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿಗೂ ಇದೆ ರೀತಿಯಾದ ವಂಚಿಸುವ ಯತ್ನ ನಡೆದಿತ್ತು. ಆದರೆ, ರಾಜ್ಯ ಸರ್ಕಾರ ಫಲಾನುಭವಿಗಳಿಗೆ ಸಕಾಲಿಕ ಎಚ್ಚರಿಕೆ ನೀಡಿ ಅದನ್ನು ತಡೆದ್ದಿದ್ದನ್ನು ನೆನಪು ಮಾಡಿಕೊಳ್ಳಬೇಕು.

**▸▸ ಚಂದ್ರಪ್ಪ ಹೂಗಾರ್, ಬಿಜಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.